# ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

## ಸಿ ಸಿ ನಂ. 53/2024

| | | |
|---|---|---|
| ಹೆಸರು | ಮಂಜಪ್ಪ ಪಿ ಬಿ | PW –1 |
| ತಂದೆಯ ಹೆಸರು | ಪರಸಪ್ಪ ಬಾಳಕನವರ | CW –1 |
| ವಯಸ್ಸು | 39 ವರ್ಷ | |
| ಉದ್ಯೋಗ | ಕೆ ಎಸ್ ಆರ್ ಟಿ ಸಿ ಚಾಲಕ, ಹರಿಹರ | ದಿನಾಂಕಃ 09–01–2025 |
| ವಾಸ | ನಂದೀಶ್ವರ ಕ್ಯಾಂಪ್ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 2 ರಿಂದ 10 ರವರ ಪರಿಚಯ ಇದೆ. ನಾನು ಹರಿಹರ ನಗರದ ಕೆ ಎಸ್ ಆರ್ ಟಿ ಸಿ ಬಸ್ ಡಿಪ್ಪೋದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 11.09.2023 ರಂದು ರೂಟ್ ನಂ. 113 ಮತ್ತು 114 ರಲ್ಲಿ ಹರಿಹರ ಶಿವಮೊಗ್ಗ ಮಾರ್ಗವಾಗಿ ಹರಿಹರ ಬಸ್ ನಿಲ್ದಾಣದಿಂದ 11.00 ಗಂಟೆಗೆ ಬಸ್ ನ್ನು ಚಾಲನೆ ಮಾಡಿಕೊಂಡು ಶಿವಮೊಗ್ಗಕ್ಕೆ ಹೋಗಿದ್ದು, ನಂತರ ಮರಳಿ ಶಿವಮೊಗ್ಗದಿಂದ 2.00 ಗಂಟೆಗೆ ಬಿಟ್ಟು 3.53 ಗಂಟೆ ಸಮಯದಲ್ಲಿ ಹರಿಹರ ಬೈಪಾಸ್ ಗಣೇಶ ಬಾರ್ ಮುಂಬಾಗ ಬರುತ್ತಿದ್ದಾಗ ಒಂದು ಬೈಕ್ ಏಕಾಏಕಿ ನನ್ನ ಬಸ್ಸಿಗೆ ಅಡ್ಡಲಾಗಿ ಬಂದಿದ್ದರಿಂದ ನಾನು ನನ್ನ ಬಸ್ಸನ್ನು ತಡೆದು ನಿಲ್ಲಿಸಿ, ಬೈಕ್ ಚಾಲಕನಿಗೆ ಏಕೆ ಅಡ್ಡ ಬಂದಿದ್ದೀಯಾ ಎಂದು ಕೇಳಲಾಗಿ, ಬೈಕ್ ಚಾಲಕನು ನಾನು ಅಡ್ಡ ಬರುತ್ತೇನೆ ನಿನೇನು ಮಾಡುತ್ತೀಯ ಎಂದು ಹೇಳಿರುತ್ತಾನೆ. ನಂತರ ಆತನು ನಾನು ಕುಳಿತ ಸೀಟ್ ನ ಹತ್ತಿರ ಬಾಗಿಲ ಕಿಟಕಿಯ ಗ್ಲಾಸ್ ನ್ನು ಒಡೆದಿರುತ್ತಾನೆ. ನಂತರ ಬಾಗಿಲನ್ನು ತೆಗೆದು ನನ್ನ ಕೊರಳ ಪಟ್ಟಿ ಹಿಡಿದು, ತನ್ನ ಕೈ ಮುಷ್ಟಿಯಿಂದ ನನ್ನ ಮುಖಕ್ಕೆ ಗುದ್ದಿ , ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ ಮತ್ತು ಜೀವ ಬೆದರಿಕೆ ಹಾಕಿರುತ್ತಾನೆ. ಬೈಕ್ ಚಾಲಕನ ಜೊತೆ ಇದ್ದ ದರ್ಶನ ಎಂಬ ಬೈಕ ಸವಾರನು ಬೈಕ್ ಚಾಲಕನಿಗೆ ನನ್ನ ಮೇಲೆ ಹಲ್ಲೆ ಮಾಡಲು ಸಹಾಯ ಮಾಡಿರುತ್ತಾನೆ. ನಂತರ ಅಲ್ಲಿಯೇ ಇದ್ದ ಸಾರ್ವಜನಿಕರಿಗೆ ಹಲ್ಲೆ ಮಾಡಿದವರ ಬಗ್ಗೆ ವಿಚಾರಿಸಲಾಗಿ ಅವರು ಹಳೇ ಹರ್ಲಾಪುರದ ಗ್ರಾಮದವರು ಎಂದು ತಿಳಿದುಬಂದಿರುತ್ತದೆ. ಸದರಿ ಘಟನೆ ನಡೆದ ದಿನ ನನ್ನ ಜೊತೆ ನಿರ್ವಹಾಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ 4 ರವರು ನನ್ನನ್ನು ಹರಿಹರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಬಸ್ಸಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ನಂತರ ಚಿಕಿತ್ಸೆ ಪಡೆದು ಅದೇ ದಿನ ಸಂಜೆ 6.30 ಗಂಟೆ ಸಮಯಕ್ಕೆ ಪೊಲೀಸ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ನಾನು ಚಾಲನೆ ಮಾಡುತ್ತಿದ್ದ ಬಸ್ಸಿನ ಸಂಖ್ಯೆಕೆ ಎ 17 ಎಫ್ 1925 ಆಗಿರುತ್ತದೆ. ಬೈಕ್ ನಂಬರ ಕೆ ಎ 17 ಹೆಚ್ ಕೆ 9317 ಯಮಹ ಬೈಕ್ ಆಗಿರುತ್ತದೆ.

ಸದರಿ ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು

ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ 12.09.2023 ರಂದು ಪೊಲೀಸರು ನಾನು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ನನ್ನ ಮತ್ತು ಚಾಸಾ 2 ಹಾಗೂ 3 ರವರ ಸಮಕ್ಷಮ ಬೆಳಿಗ್ಗೆ 9.30 ರಿಂದ 10.30 ಗಂಟೆವರೆಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಆ ಕಾಲಕ್ಕೆ ಪೊಲೀಸರು ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದರಿ ದಾಖಲೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ, ಸಾಕ್ಷಿಯು ತಾನು ಅದರಲ್ಲಿ ಇರುದನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪೊಲೀಸರು ಹರಿಹರದ ಕೆ ಎಸ್ ಆರ್ ಟಿ ಸಿ ಡಿಪೋದಲ್ಲಿ ಬಸ್ಸಿನ ಸಂಖ್ಯೆ ಕೆ ಎ 17 ಎಫ್ 1925 ರ ಬಸ್ಸಿನ ಬಲಭಾಗದ ಚಾಲಕನ ಸೀಟ್ ನ ಕಿಟಕಿ ಗ್ಲಾಸ್ ಒಡೆದು ಅಂದಾಜು ರೂ.1,000/- ನಷ್ಟವಾದ ಬಗ್ಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು 10.45 ರಿಂದ 11.45 ಗಂಟೆವೆರೆಗೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಬಸ್ಸ ನ್ನು ಮತ್ತು ಆದ ನಷ್ಟವನ್ನು ನಾನೇ ತೋರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರತಿಸಲಾಯಿತು. ಆ ಕಾಲಕ್ಕ ಪೊಲೀಸರು ಎರಡು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 5 ಮತ್ತು ನಿಪಿ 6 ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಪೊಲೀಸರು ಹಳೇ ಹರ್ಲಾಪುರ ಗ್ರಾಮದ ಗ್ರಾಮ ಪಂಚಾಯತಿ ಮುಭಾಗದಲ್ಲಿ ಕೃತ್ಯಕ್ಕೆ ಬಳಸಿದ ಬೈಕ್ ನಂ. ಕೆ ಎ 17 ಹೆಚ್ ಕೆ 9317 ಯಮಹ ಬೈಕ್ ನ್ನು ಬೆಳಿಗ್ಗೆ 11.45 ರಿಂದ 1.00 ಗಂಟೆವರೆಗೆ ನನ್ನ ಹಾಗೂ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಬೈಕ್ ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ಪೊಲೀಸರು ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಛಾಯಾಚಿತ್ರವನ್ನು ನಿಪಿ 8 ಎಂದು ಗುರುತಿಸಲಾಯಿತು. ನಂತರ ದಿನಾಂಕ 20.12.2023 ರಂದು ಪೊಲೀಸರು ನನ್ನ ಹಾಗೂ ಚಾಸಾ 13 ಮತ್ತು 14 ರವರ ಸಮಕ್ಷಮ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಿನಾಂಕ 11.09.2023 ರಂದು ಕೃತ್ಯ ನಡೆದ ಬಗ್ಗೆ ಚಾಸಾ 4 ರವರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ರೆಕಾರ್ಡ ಮಾಡಿದ್ದನ್ನು ಸಿಡಿ ತಯಾರಿಸಿ, ಮಧ್ಯಾಹ್ನ 12.15 ರಿಂದ 1.00 ಗಂಟೆವೆರೆ ಪಂಚನಾಮೆಯನ್ನು ಜರುಗಿಸಿ, ಸಿಡಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ಪೊಲೀಸರು ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು, ಛಾಯಾಚಿತ್ರವನ್ನು ನಿಪಿ 10 ಎಂದು ಗುರುತಿಸಲಾಯಿತು.

ಸಾಕ್ಷಿಯು ಈ ದಿನಾ ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಘಟನೆ ನಡೆದಿದೆ ಎಂದು ಹೇಳಲಾದ ದಿನ ನಮ್ಮ ಬಸ್ಸಿನಲಿಲ ಸಾಕಷ್ಟು ಪ್ರಯಾಣಿಕರು ಎಂದರೆ ಸರಿ. ಅದೇ ರೀತಿಯಾಗಿ ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಮತ್ತು ಜನರ ಸಂಚಾರ ಇತ್ತು ಎಂದರೆ ಸರಿ. ಸದರಿ ರಸ್ತೆಯ

ಎರಡೂ ಬದಿಯಲ್ಲಿ ಡಾಬಾಗಳು ಇವೆ ಎಂದರೆ ಸರಿ. ಸದರಿ ರಸ್ತೆಯು ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಮಾನ್ಯವಾಗಿ ಎರಡು ದೊಡ್ಡ ವಾಹನಗಳು ಹೋಗುತ್ತಿರುವಾಗ ಚಿಕ್ಕ ವಾಹನವು ರಸ್ತೆಯ ಪಕ್ಕದ ಕಚ್ಚಾ ರಸ್ತೆಯ ಮೇಲೆ ಹೋಗುತ್ತವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ದೊಡ್ಡ ವಾಹನಗಳು ಹೋಗುತ್ತಿರುವಾಗ ಹಿಂದೆ ಬರುತ್ತಿರುವ ವಾಹನಗಳು ಹಿಂದಿಕ್ಕಿ ಮುಂದೆ ಚಲಾಯಿಸಲು ಬರುತ್ತಿದಿಲ್ಲ ಎಂದರೆ ಸರಿ. ನಾನು ಬಸ್ ಚಾಲನೆ ಮಾಡುತ್ತಿದ್ದಾಗ ಬೈಕ್ ಚಾಲಕನು ನಮ್ಮ ಬಸ್ಸಿನ ಹಿಂದೆ ಬರುತ್ತಿದ್ದು, ನಾನು ಅವರಿಗೆ ಮುಂದೆ ಹೋಗಲು ದಾರಿ ಕೊಡದೇ ಇದ್ದುದ್ದರಿಂದ, ಸದರಿ ಬೈಕ್ ಚಾಲಕನು ಮುಂದೆ ಬಂದು ನನಗೆ ಏಕೆ ದಾರಿ ಕೊಡಲಿಲ್ಲ ಎಂದು ಕೇಳಿದನು ಎಂದರೆ ಸರಿಯಲ್ಲ. ಈ ರೀತಿಯಾಗಿ ಬೈಕ್ ಚಾಲಕನು ನನಗೆ ಕೇಳಲು ಬಂದಾಗ ನಾನೇ ಬೈಕ್ ಚಾಲಕನಿಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿತರು ದೂರು ಸಲ್ಲಿಸಬಹುದು ಎಂಬ ಭಾವನೆಯಿಂದ ನಾನೇ ಅವರ ವಿರುದ್ಧ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ 1 ದೂರನ್ನು ನಾನೇ ಹೇಳಿ ಬೆರಳಚ್ಚು ಪಡಿಸಿರುತ್ತೇನೆ ಎಂದರೆ ಸರಿ. ನಿಪಿ 1 ದೂರಿನಲ್ಲಿ ನನಗೆ ತೀವ್ರ ಸ್ವರೂಪದ ಗಾಯಗಳಾಗಿದ್ದರಿಂದ ನನಗೆ ಮಾತನಾಡಲು ಬರುತ್ತಿರಲಿಲ್ಲ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಅದೇ ರೀತಿ ನಿಪಿ 1 ರಲ್ಲಿ ಚಾಸಾ 4 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ನನ್ನ ಗಾಯದ ಪ್ರಮಾಣ ಪತ್ರದಲ್ಲಿ ಜೊತೆಯಲ್ಲಿ ಎಂದು ಇರುವ ಮುಂದೆ Self ಎಂದು ನಮೂದು ಇದೆ ಎಂದರೆ ಸರಿ. ನಿಪಿ 2 ನ್ನು ತಯಾರಿಸಿದ ಪೊಲೀಸ ಅಧಿಕಾರಿಯ ಹೆಸರು ನನಗೆ ಹೇಳಲು ಬರುವುದಿಲ್ಲ. ನಿಪಿ 2 ನ್ನು ಪೊಲೀಸರು ತಯಾರಿಸಿ ನನಗೆ ಮತ್ತು ಸಾಕ್ಷಿದಾರರಿಗೆ ಸಹಿ ಮಾಡಲು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.ನಿಪಿ 3 ರಲ್ಲಿ ನನಗೆ ಗಾಯಗಳಾದ ಬಗ್ಗೆ ಯಾವುದೇ ಕುರುಹುಗಳು ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ 5 ಮತ್ತು 6 ನ್ನು ತೆಗೆದ ಪೊಲೀಸ್ ಅಧಿಕಾರಿಯ ಹೆಸರು ನನಗೆ ಹೇಳಲು ಆಗುವುದಿಲ್ಲ. ಆರೋಪಿತರ ವಿರುದ್ಧ ನಾನೇ ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿ, ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.